# ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು

ದಿನಾಂಕ: 17-08-2023 ರಂದು ಮುಂಜಾನೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

## ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಡಾ. ಇಕ್ಬಾಲ್ ಶೇಖ್, – ಸದಸ್ಯರು
3. ಡಾ. ಎ.ಆರ್. ಪುರವಂತ, – ಸದಸ್ಯರು
4. ಶ್ರೀ. ಟಿ. ಶಿವಪ್ರಸಾದ ರಾವ್, – ಸದಸ್ಯರು
5. ಶ್ರೀ. ಎನ್. ಸತೀಶ, – ಸದಸ್ಯರು
6. ಶ್ರೀ. ಕಿಶನ್ ರಾಥೋಡ, – ಸದಸ್ಯರು
7. ಶ್ರೀ. ಪಾಂಡು, – ಸದಸ್ಯರು
8. ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, – ಸದಸ್ಯರು
9. ಶ್ರೀ. ಮೊಹ್ಮದ್ ಮುಜಾಕೀರ್ ಅಲಿ, – ಸದಸ್ಯರು
10. ಶ್ರೀ. ನಾಗರಾಜ ನಾಯಕ (ಹಣಕಾಸು ಅಧಿಕಾರಿಗಳು) – ಸದಸ್ಯರು
11. ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
12. ಪ್ರೊ. ಪಾರ್ವತಿ ಸಿ. ಎಸ್. (ಡೀನರು) – ಸದಸ್ಯರು
13. ಪ್ರೊ. ಪಿ. ಭಾಸ್ಕರ್, (ಡೀನರು) – ಸದಸ್ಯರು
14. ಪ್ರೊ. ನುಸ್ರತ್ ಫಾತಿಮಾ, (ಡೀನರು) – ಸದಸ್ಯರು
15. ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
16. ಡಾ. ಜಿ.ಎಸ್. ಬಿರಾದಾರ, ಗ್ರಂಥಪಾಲಕರು – ಸದಸ್ಯರು
17. ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲಯನೇದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ ಐಟಂ | ವಿಷಯ | ವಿದ್ಯಾವಿಷಯಕ ಪರಿಷತ್‌ನ ನಿರ್ಣಯ |
|---|---|---|
| 01 | ದಿನಾಂಕ: 21.06.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ತುರ್ತು ಸಭೆಯ ನಡವಳಿಗಳನ್ನು ಧೃಡಿಕರಿಸುವ ಕುರಿತು. | ದಿನಾಂಕ: 21.06.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ತುರ್ತು ಸಭೆಯ ನಡವಳಿಗಳನ್ನು ಧೃಡಿಕರಿಸಲಾಯಿತು. |
| 02 | 2023-24ರ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಮೂಲಕ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ ಕಾಲೇಜುಗಳಿಗೆ ಸ್ಥಳೀಯ ತನಿಖಾ ಸಮಿತಿಗಳು ಭೌತಿಕವಾಗಿ ಭೇಟಿ ನೀಡಿ ತಪಾಸಣೆ ಮಾಡಿ ಆನ್‌ಲೈನ್ ಪೋರ್ಟಲ್‌ನಲ್ಲಿ ಮಾಹಿತಿಯನ್ನು ದಾಖಲಿಸಿ ವರದಿ ಸಲ್ಲಿಸಿರುವ ಕಾಲೇಜುಗಳ ಸ್ಕೋರ್‌ಕಾರ್ಡ ಹಾಗೂ ಸ್ಥಳೀಯ ತನಿಖಾ ಸಮಿತಿಯವರ ವಿವರಗಳನ್ನು ಕರ್ನಾಟಕ ಸರ್ಕಾರದ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59ರ ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮದ ಬಗ್ಗೆ ಚರ್ಚೆ | 2023-24 ನೇ ಸಾಲಿಗೆ ಸಂಯೋಜನಾ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ 178 ಕಾಲೇಜುಗಳಿಗೆ LIC ತಂಡವು ಭೇಟಿ ನೀಡಿ ಆನ್‌ಲೈನ್ ಪೋರ್ಟಲ್ ದಲ್ಲಿ ವರದಿಯನ್ನು ಸಲ್ಲಿಸಿರುವ ಮಾಹಿತಿಯನ್ನು ಡಾ. ರಾಘವೇಂದ್ರ ಫತ್ತೇಪೂರ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ಇವರು ಸಭೆಗೆ ಮಂಡಿಸಿದರು, ವಿಸ್ತೃತ ಚರ್ಚೆಯ ನಂತರ ಸಭೆಯು 35 ಕ್ಕಿಂತ ಕಡಿಮೆ ಸಂಯೋಜನಾ ಅಂಕಗಳನ್ನು ಪಡೆದ 7 ಕಾಲೇಜುಗಳಿಗೆ 2023-24 ನೇ ಸಾಲಿಗೆ ಸಂಯೋಜನೆ ಮುಂದುವರಿಸಲಾಗುವುದಿಲ್ಲ ಎಂದು ನೋಟಿಸ್ ಜಾರಿ |

| | | |
|---|---|---|
| | | ಮಾಡಲು ನಿರ್ಧರಿಸಿತು ಮತ್ತು ಮರು LIC ತನಿಖೆಗೆ ಕಾಲೇಜುಗಳು ವಿನಂತಿಸಿದಲ್ಲಿ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲು ಸಭೆ ನಿರ್ಧರಿಸಿತು. |
| 03 | 2023–24 ನೇ ಸಾಲಿಗೆ ಸಂಯೋಜನೆಗೆ UUCMS ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸದೇ ಇರುವ 11 ಕಾಲೇಜುಗಳ ಮೇಲೆ ಕ್ರಮ ಕೈಗೊಳ್ಳುವ ಕುರಿತು. | 2023–24 ನೇ ಸಾಲಿಗೆ 11 ಕಾಲೇಜುಗಳು ಸಂಯೋಜನೆ ಅರ್ಜಿ ಸಲ್ಲಿಸದೇ ಇರುವ ಕಾಲೇಜುಗಳ ಪೈಕಿ 3 ಕಾಲೇಜುಗಳು ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿರುವುದರಿಂದ ವಿಶ್ವವಿದ್ಯಾಲಯ ನಿಮಾವಳಿಗಳ ಪ್ರಕಾರ LIC ತಂಡವನ್ನು ಕಾಲೇಜಿನ ತನಿಖೆಗೆ ಕಳುಹಿಸಿ ಅವರು ನೀಡುವ ವರದಿ ಆಧಾರದ ಮೇಲೆ ನಿಯಮನುಸಾರ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು. |
| 04 | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023–24 ನೇ ಸಾಲಿನಿಂದ ಹೊಸ ಕೋರ್ಸ/ ವಿಷಯ ಪ್ರಾರಂಭಿಸಲು ಕರ್ನಾಟಕ ಸರ್ಕಾರದ ಆದೇಶದ ಕುರಿತು. | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 2023–24 ನೇ ಸಾಲಿನಿಂದ ಹೊಸ ಕೋರ್ಸ್/ ಹೊಸ ವಿಷಯ ಪ್ರಾರಂಭಿಸಲು ಕರ್ನಾಟಕ ಸರ್ಕಾರ ನೀಡಿದ ಆದೇಶದ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯವು ಸರ್ಕಾರದ ಆದೇಶವನ್ನು ಪಾಲಿಸಿ UUCMS ತಂತ್ರಾಂಶದಲ್ಲಿ ಇದರ ಅಳವಡಿಕೆಯನ್ನು ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯಲ್ಲಿ ನಿರ್ಧರಿಸಲಾಯಿತು. |
| 05 | BCA ಕೋರ್ಸ್‌ಗೆ ವಿದ್ಯಾರ್ಥಿಗಳ ಪ್ರವೇಶದ ಅರ್ಹತೆ ಕುರಿತು ಚರ್ಚೆ. | BCA ಕೋರ್ಸ್‌ಗೆ ವಿದ್ಯಾರ್ಥಿಗಳ ಪ್ರವೇಶ ಅರ್ಹತೆಯನ್ನು ಪುನರ್ ಪರಿಶೀಲಿಸಿ (ಪಿ.ಯು ಕಲಾ ವಿಭಾಗ PU(10+2) Arts) ಪಾಸಾದ ವಿದ್ಯಾರ್ಥಿಗಳಿಗೂ ಕೂಡಾ BCA ಅಧ್ಯಯನಕ್ಕೆ ಅವಕಾಶ ನೀಡಲು ಸಭೆಯು ಸರ್ವಾನುಮತದಿಂದ ನಿರ್ಧರಿಸಿತು. |
| 06 | ರಾಯಚೂರು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಗೊಳ್ಳಬೇಕಾಗಿರುವ ಪುಸ್ತಕಗಳ ಗುಣಮಟ್ಟತೆ ಮತ್ತು ವಿಷಯವನ್ನು ನಿರ್ಧರಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದಲ್ಲಿ ಪ್ರಸಾರಾಂಗದಿಂದ ಪ್ರಕಟಗೊಳ್ಳಬೇಕಾಗಿರುವ ಪುಸ್ತಕಗಳ ಗುಣಮಟ್ಟತೆ ನಿರ್ಧರಿಸಲು ಮಾನ್ಯ ಕುಲಪತಿಗಳಿಗೆ ಸೂಕ್ತವಾದ ತಜ್ಞರ ಹೆಸರುಗಳನ್ನು ಸೂಚಿಸಿ, ಸಮಿತಿಯೊಂದನ್ನು ರಚಿಸಿ ಆ ಸಮಿತಿ ನೀಡುವ ವರದಿ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ನಿರ್ಧರಿಸಿತು. ಮುಂದುವರೆದು ಪ್ರಸಾರಂಗದಿಂದ ವಿಸ್ತರಣಾ ಉಪನ್ಯಾಸಗಳನ್ನು ನಡೆಸಲು ಸಭೆಯು ನಿರ್ಣಯಿಸಿತು. |
| 07 | ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಶುಲ್ಕಗಳನ್ನು ಪಾವತಿಸಿಕೊಳ್ಳುವ ಕುರಿತು ಚರ್ಚೆ. | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ (KSHEC) ಬೆಂಗಳೂರು ಇವರಿಗೆ ಈ ಕುರಿತು ಪತ್ರ ಬರೆದು ಅವರ ನಿರ್ದೇಶನದ ಪ್ರಕಾರ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ಸಭೆಯು ನಿರ್ಣಯಿಸಿತು. |

| | | |
|---|---|---|
| 08 | ರಾಯಚೂರು ವಿಶ್ವವಿದ್ಯಾಲಯದಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹೊಸ ಸ್ನಾತಕೋತ್ತರ ಕೋರ್ಸ್‌ಗಳಾದ M.Ed ಮತ್ತು M.P.Ed ಪ್ರಾರಂಭಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದಲ್ಲಿ M.Ed ಮತ್ತು M.PEd ಕೋರ್ಸ್‌ಗಳನ್ನು ಹೊಸದಾಗಿ ವಿಶ್ವವಿದ್ಯಾಲದಲ್ಲಿ ಪ್ರಾರಂಭಿಸಲು ವಿಸ್ತೃತವಾದ ಚರ್ಚೆ ನಡೆಸಿ, ಈ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ವರದಿ ನೀಡಲು M.Ed ಕೋರ್ಸ್‌ಗೆ 3 ಜನರ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲು ನಿರ್ಧರಿಸಿ, ಸಿಂಡಿಕೇಟ್‌ನಿಂದ ಒಬ್ಬ ಸದಸ್ಯರನ್ನು ಅಧ್ಯಕ್ಷರನ್ನಾಗಿ ಹಾಗೂ ವಿದ್ಯಾ ವಿಷಯಕ ಪರಿಷತ್‌ನಿಂದ ಇಬ್ಬರು ಸದಸ್ಯರನ್ನು ನೇಮಿಸಲು ನಿರ್ಣಾಯಿಸಲಾಯಿತು. ಹಾಗೆಯೇ M.PEd ಕೋರ್ಸ್ ಪ್ರಾರಂಭಿಸಲು 3 ಜನ ಸದಸ್ಯರ ಸಮಿತಿಯನ್ನು ರಚಿಸಲು ನಿರ್ಧರಿಸಿ, (M.PEd ಕೋರ್ಸ್ ಇಲ್ಲದಿರುವ ಕಾರಣದಿಂದ) ವಿಶ್ವವಿದ್ಯಾಲಯದಲ್ಲಿ B.PEd ಕೋರ್ಸ್ ನಡೆಸುತ್ತಿರುವ ಎರಡು ಸಂಸ್ಥೆಗಳಲ್ಲಿ ಒಂದು ಸಂಸ್ಥೆಯ ಪ್ರಾಚಾರ್ಯರನ್ನು ಸಂಯೋಜಕರನ್ನಾಗಿ ನೇಮಿಸಿ, ಬಾಹ್ಯ ವಿಶ್ವವಿದ್ಯಾಲಯಗಳಿಂದ ದೈಹಿಕ ಶಿಕ್ಷಣ ವಿಭಾಗದ (M.PEd) ತಜ್ಞರನ್ನ ಅಧ್ಯಕ್ಷರು ಹಾಗೂ ಸದಸ್ಯರನ್ನಾಗಿ ಕುಲಪತಿಗಳು ನೇಮಿಸಿ ವಿವರವಾದ ವರದಿಯನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. |
| 09 | ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಪ್ರಥಮ ರ್‍ಯಾಂಕ/ಪ್ರಥಮ ಸ್ಥಾನ/ಹೆಚ್ಚಿನ ಅಂಕ ಪಡೆದ ರಾಯಚೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ನೀಡಲು ಇಚ್ಛಿಸುವ ವ್ಯಕ್ತಿಗಳು/ಸಂಸ್ಥೆಗಳಿಗೆ ಅವಕಾಶ ನೀಡುವ ಕುರಿತು. | ಸ್ನಾತಕ ಮತ್ತು ಸ್ನಾತಕೊತ್ತರ ಪದವಿಗಳಲ್ಲಿ ರ್‍ಯಾಂಕ ವಿಜೇತ ವಿದ್ಯಾರ್ಥಿಗಳಿಗೆ ಬಂಗಾರದ ಪದಕವನ್ನು ನೀಡುವ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿತು ಈ ಕುರಿತು ಮುಂದಿನ ಕ್ರಮಕ್ಕಾಗಿ ವಿಶೇಷ ಸಮಿತಿಯೊಂದನ್ನು ರಚಿಸಲು ಮತ್ತು ವರದಿಯನ್ನು ಪಡೆಯಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ಸರ್ವಾನುಮತದಿಂದ ಸಭೆಯು ನಿರ್ಣಯಿಸಿತು. |
| 10 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು.<br><br>ಕುಲಸಚಿವರು, ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದಲ್ಲಿರುವ ಪ್ರಾಧ್ಯಾಪಕರುಗಳಾದ ಪ್ರೊ. ಪಾರ್ವತಿ ಸಿ. ಎಸ್ ಹಾಗೂ ಪ್ರೊ. ಪಿ. ಬಾಸ್ಕರ್ ಇವರುಗಳ ಕೋರಿಕೆಯ ಮೆರೆಗೆ ಗೈಡ್‌ಶಿಪ್ ನೀಡುವ ಕುರಿತು ಚರ್ಚಿಸಲು ಅಧ್ಯಕ್ಷರ ಅನುಮತಿ ಕೋರಿದರು. | ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದಲ್ಲಿರುವ ಪ್ರಾಧ್ಯಾಪಕರುಗಳಾದ ಪ್ರೊ. ಪಾರ್ವತಿ ಸಿ. ಎಸ್ ಹಾಗೂ ಪ್ರೊ. ಪಿ. ಬಾಸ್ಕರ್ ಇವರುಗಳ ಕೋರಿಕೆಯ ಮೆರೆಗೆ ವಿಸ್ತೃತವಾದ ಚರ್ಚೆ ನಡೆಸಿ ರಾಯಚೂರು ವಿಶ್ವವಿದ್ಯಾಲಯದಲ್ಲಿರುವ 20 ವಿಭಾಗಗಳಲ್ಲಿ ಕೇವಲ ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದಲ್ಲಿ ಮಾತ್ರ ಖಾಯಂ ಪ್ರಾಧ್ಯಾಪಕರಿದ್ದು, ಇವರುಗಳನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಪಿ.ಹೆಚ್.ಡಿ ಮಾರ್ಗದರ್ಶಕರೆಂದು ಗುರುತಿಸಿ, (ಹಿಂದಿನ ಪಿ.ಜಿ ಸೆಂಟರ್ ರಾಯಚೂರು) ಅವರಿಗೆ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಿದ್ದಾರೆ. ರಾಯಚೂರು ವಿಶ್ವವಿದ್ಯಾಲಯ ತನ್ನ ಸಂಶೋದನೆ ಚಟುವಟಿಕೆಗಳನ್ನು ಪ್ರಾರಂಭಿಸಿ Ph.D ಪದವಿ ಪಡೆಯಲ್ಬಿಸುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ |

| | | |
|---|---|---|
| | | ದೃಷ್ಟಿಯಿಂದ ಸದರಿ ಖಾಯಂ ಪ್ರಾಧ್ಯಾಪಕರನ್ನು ರಾಯಚೂರು ವಿಶ್ವವಿದ್ಯಾಲಯವು ಗುಲ್ಬರ್ಗ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಮಾರ್ಗದರ್ಶನ ನೀಡಲು ಸಭೆಯು ಒಪ್ಪಿಗೆ ಸೂಚಿಸಿತು. ಉಳಿದ ವಿವಿಧ ವಿಭಾಗಗಳ ಖಾಯಂ ಅಧ್ಯಾಪಕರ ನೇಮಕಾತಿಯ ನಂತರ ಹಾಗೂ ವಿಶ್ವವಿದ್ಯಾಲಯದ UGC 2018 ರ ಮಾರ್ಗಸೂಚಿ ಅನ್ವಯ ಪಿ.ಹೆಚ್.ಡಿ ಪರಿನಿಯಮಾವಳಿಗಳನ್ನು ರಚಿಸಿ ಸರ್ಕಾರದಿಂದ ಅನುಮೋದನೆ ಪಡೆದು ಅದರಂತೆ ಪಿ.ಹೆಚ್.ಡಿ ಮಾರ್ಗದರ್ಶಕರನ್ನು ಗುರುತಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. |

17/8/23

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

17.8.2023

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.